**ಅಸಲು ದಾವಾ ಸಂಖ್ಯೆಃ 1371/2013**

**ಪಿ.ಡಬ್ಲೂ -1**

ದಿಃ 02-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ. YGG ರವರಿಂದಃ-**

1. ಸರ್ವೆ ನಂಬರ 113 ರಲ್ಲಿ ಇರುವ ಆಸ್ತಿಯು ಫಕೀರಾಬಾಯಿ ಅವರ ಗಂಡನ ಆಸ್ತಿ ಎಂದರೆ ಸರಿ. ಫಕೀರಾಬಾಯಿ ಅವರ ಗಂಡ ಗಣೇಶ ಅವರು ಮೃತ ಪಟ್ಟ ನಂತರ ವಾರಸಾನಾತೆಯಿಂದ ಫಕೀರಾಬಾಯಿ ಅವರ ಹೆಸರು ಸರ್ವೆ ನಂಬರ 113 ಕ್ಕೆ ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರ ನಾವು ಸದರಿ ಆಸ್ತಿಯನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಫಕೀರಾಬಾಯಿ ಅವರ ಜೀವಿತ ಕಾಲದಲ್ಲಿ ಅವರ ವಿರುದ್ಧ ದಾವೆ ಸಲ್ಲಿಸಲು ಅಥವಾ ಅವರಿಗೆ ನೋಟಿಸನ್ನು ಜಾರಿ ಮಾಡಿರುವುದಿಲ್ಲ . ಆ ರೀತಿ ಕ್ರಮ ಕೈಗೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಸಾಕ್ಷಿ ಮುಂದುವರೆದು ಆಸ್ತಿಯು ನಮ್ಮ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ . ನಿಮ್ಮ ತಂದೆಯವರ ಸಾಕ್ಷಿ ವಿಚಾರಣೆ ಮಾಡಲು ತೊಂದರೆ ಇದೆ ಎಂದರೆ ಅವರ ಆರೋಗ್ಯದ ಸಮಸ್ಯೆಯಿಂದ ಸಾಕ್ಷಿ ನುಡಿಯಲು ಹಾಜರಾಗಲು ತೊಂದರೆ ಆಗುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಅವರಿಗೆ ಓಡಾಡಲು ತೊಂದರೆ ಇದ್ದು ಅವರಿಗೆ ಮಾತನಾಡಲು ಮನೆಯಲ್ಲಿ ಯಾವುದೇ ತೊದರೆ ಇರುವುದಿಲ್ಲ . ನಿಪಿ-7 ಕ್ಕೆ ಫಕೀರಾಬಾಯಿ ಹಾಗೂ ಅವರ ಮಕ್ಕಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ

ಅವರೆ ಬರೆದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ಇರುಂತಹ ಹೆಬ್ಬೆಟ್ಟಿನ ಗುರುತನ್ನು ಯಾರೂ ಕೂಡ ಹಾಕಬಹುದು ಎಂದರೆ ಹಾಕಬಹುದು. ನಿಪಿ-7 ರಲ್ಲಿ ನನ್ನ ತಂದೆಯ ಸಹಿ ಇರುವುದಿಲ್ಲ. ನಿಪಿ-7 ನ್ನು ನಿಮ್ಮ ಅನೂಕೂಲಕ್ಕೆ ತಕ್ಕಂತೆ ತಯಾರಿಸಿಕೊಂಡು ಈ ದಾವೆಯಲ್ಲಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.1993 ರಲ್ಲಿ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಖರೀದಿ ಪತ್ರ ಅಥವಾ ದಾನಪತ್ರವನ್ನು ನೊಂದಾಯಿಸಬೇಕಿತ್ತು ಎಂದರೆ ಸರಿ . ನಿಪಿ-7 ನ್ನು ಫಕೀರಾಬಾಯಿ ಅವರ ಮಕ್ಕಳು ಬರೆದು ನೀಡದೆ ಇದ್ದ ಕಾರಣ ಅದನ್ನು ನೊಂದಾಯಿಸಿರುವುದಿಲ್ಲ ಎಂದರೆ ಫಕೀರಾಬಾಯಿ ಅವರ ಮಕ್ಕಳು ಬರೆದು ನೀಡಿರುತ್ತಾರೆ ಆ ಸಮಯದಲ್ಲಿ 3 ಎಕರೆಗಿಂತ ಹೆಚ್ಚಿನ ಜಮೀನು ಇದ್ದರೆ ಮಾತ್ರ ನೊಂದಣಿ ಆಗುತ್ತಿತ್ತು ಆ ಕಾರಣಕ್ಕೆ ನೊಂದಣಿ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ .3 ಎಕರೆಗಿಂತ ಕಡಿಮೆ ಜಮೀನನ್ನು ನೊಂದಣಿ ಮಾಡಲು ಇಲ್ಲ ಎಂದು ಯಾವುದೇ ಸರ್ಕಾರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ನಿಪಿ-7 ರ ಮೊದಲ 2 ಹಾಳೆಗಳಲ್ಲಿ ಸಹಿ ಪಡೆಯಲು ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ಕ್ರಯದ ಮೊಬಲಗನ್ನು ಸಂಪೂರ್ಣ ನೀಡಿ ಜಮೀನನ್ನು ಖರೀದಿಸಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-11 ರಂತೆ ಕ್ರಯದ ಮೊಬಲಗನ್ನು ನೀಡಿ ಖರೀದಿಸಿರುತ್ತಾರೆ ಎಂದರೆ ಕ್ರಯದ ಮೊಬಲಗನ್ನು ನೀಡಿದ ನಮೂದನೆ ಇದೆ ಆದರೆ ನಮಗೆ ಮೊಸ ಮಾಡಿ ಖರೀದಿಗೆ

ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-11 ರಂತೆ ಪ್ರತಿವಾದಿ ಸಂಖ್ಯೆ 4 ಮತ್ತು 5 ರವರಿಗೆ ದಾವಾ ಜಮಿನಿನ ಕಬ್ಜೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಬಳಿ ಕಬ್ಜೆ ಇದೆ. ನಿಪಿ-11 ರಂತೆ ಪ್ರತಿವಾದಿ ಸಂಖ್ಯೆ 4 ಮತ್ತು 5 ರವರ ಹೆಸರು ಉತಾರೆಯಲ್ಲಿ ನಮೂದು ಆಗಿದೆ ಎಂದರೆ ಸರಿ. 4 ಮತ್ತು 5 ರವರ ಹೆಸರನ್ನು ಉತಾರೆಯಲ್ಲಿ ನನಗೆ ಮೊಸ ಮಾಡಿ ನಮೂದಿಸಲಾಗಿದೆ ಎಂದು ಪೋಲಿಸ ಠಾಣೆಯಲ್ಲಿ ಯಾವುದೆ ದೂರನ್ನು ದಾಖಲಿಸಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ಕ್ರಮವನ್ನು ಕೈಗೂಂಡಿರುವುದಿಲ್ಲ. ನಿಪಿ-15 ರಿಂದ 24 ರವರೆಗೆ ದಾಖಲೆಗಳಲ್ಲಿ ಸರ್ವೆ ನಂಬರನ ಉಲ್ಲೇಖ ಇಲ್ಲ ಎಂದರೆ ಸರ್ವೆ ನಂಬರ ನಮೂದಿಸುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-15 ರಿಂದ 24 ರ ವರೆಗಿನ ಬಿಲ್ಲುಗಳು ಸುಳ್ಳು ದಾಖಲಾತಿ ಆಗಿದ್ದು ಆ ಕಾರಣ ಅದರಲ್ಲಿ ಸರ್ವೆ ನಂಬರನ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 4 ಮತ್ತು 5 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

Sd/-

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**